# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

## ಮಲ್ಲೇಶ್ವರಂ, ಬೆಂಗಳೂರು – 560 003

## 2024–25 ರ ಎಸ್. ಎಸ್. ಎಲ್. ಸಿ. ಮಾದರಿ ಪ್ರಶ್ನೋತ್ತರ ಪತ್ರಿಕೆ – 1.

## ವಿಷಯ : ಪ್ರಥಮ ಭಾಷೆ ಕನ್ನಡ

**ಸಮಯ : 3–15 ಗಂಟೆಗಳು** **ಗರಿಷ್ಠ ಅಂಕಗಳು : 100**

**I.** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. **6 * 1 = 6**

1. **ಕನ್ನಡ ವರ್ಣಮಾಲೆಯಲ್ಲಿರುವ ವರ್ಗದ ಪಂಚಮಾಕ್ಷರಗಳು;**
   (ಎ) ಅಲ್ಪಪ್ರಾಣಾಕ್ಷರಗಳು (ಬಿ) ಮಹಾಪ್ರಾಣಾಕ್ಷರಗಳು
   (ಸಿ) ಅನುನಾಸಿಕ (ಡಿ) ಯೋಗವಾಹಗಳು
   **ಉತ್ತರ : (ಸಿ) ಅನುನಾಸಿಕ**
2. **ಪಂಚಮೀ ವಿಭಕ್ತಿಯ ಕಾರಕಾರ್ಥವಿದು;**
   (ಎ) ಸಂಪ್ರದಾನ (ಬಿ) ಅಪಾದಾನ
   (ಸಿ) ಅಧಿಕರಣ (ಡಿ) ಕರಣಾರ್ಥ
   **ಉತ್ತರ : (ಬಿ) ಅಪಾದಾನ**
3. **ದೇವರು ನಿಮಗೆಲ್ಲರಿಗೂ ಶುಭವನ್ನುಂಟು <u>ಮಾಡಲಿ.</u> – ಗೆರೆ ಎಳೆದ ಪದದ ಕ್ರಿಯಾರೂಪ;**
   (ಎ) ವಿಧ್ಯರ್ಥಕ (ಬಿ) ಸಂಭಾವನಾರ್ಥಕ
   (ಸಿ) ನಿಷೇಧಾರ್ಥಕ (ಡಿ) ಆತ್ಮಾರ್ಥಕ
   **ಉತ್ತರ : (ಎ) ವಿಧ್ಯರ್ಥಕ**
4. **ಬಹುವ್ರೀಹಿ ಸಮಾಸದ ಪದವಿದು;**
   (ಎ) ಮುಕ್ಕಣ್ಣು (ಬಿ) ಕಡೆಗಣ್ಣು
   (ಸಿ) ಕಂಗೆಡು (ಡಿ) ಚಕ್ರಪಾಣಿ
   **ಉತ್ತರ : (ಡಿ) ಚಕ್ರಪಾಣಿ**
5. **ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು;**
   (ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ
   (ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ
   **ಉತ್ತರ : (ಬಿ) ಸಂಯೋಜಿತ ವಾಕ್ಯ**
6. **'ತರುವಾಯ' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ;**
   (ಎ) ಅವಧಾರಣಾರ್ಥಕಾವ್ಯಯ (ಬಿ) ಅನುಕರಣಾವ್ಯಯ
   (ಸಿ) ಸಾಮಾನ್ಯಾರ್ಥಕಾವ್ಯಯ (ಡಿ) ಕ್ರಿಯಾರ್ಥಕಾವ್ಯಯ
   **ಉತ್ತರ : (ಸಿ) ಸಾಮಾನ್ಯಾರ್ಥಕಾವ್ಯಯ**

**II.** ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. **4 * 1 = 4**

7. ವೈಶಾಖ : ಬೇಸಗೆ : ಪ್ರತೀಹಾರಿ : **<u>ಪಡಿಯಱ.</u>**
8. ಚೆಲುವಿಕೆ : ತದ್ಧಿತಾಂತ ಭಾವನಾಮ : : ತಿನ್ನುವಿಕೆ : **<u>ಕೃದಂತ ಭಾವನಾಮ.</u>**
9. ಮಕ್ಕಳುಮರಿ : ಜೋಡುನುಡಿ : : ಬಟ್ಟಬಯಲು : **<u>ದ್ವಿರುಕ್ತಿ.</u>**
10. ಮನುಷ್ಯ : ರೂಢನಾಮ : : ಪೂಜಾರಿ : **<u>ಅನ್ವರ್ಥನಾಮ.</u>**

**III.** ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. **7 * 1 = 7**

11. **ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?**
    ಹಸಿದು ಮಲಗಿದ್ದ ಹುಲಿಯು 'ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ' ಎಂದು ಯೋಚಿಸಿತು.
12. **ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?**
    ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ 'ನಾಲ್ವಡಿ ಕೃಷ್ಣರಾಜ ಒಡೆಯರು' ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದರು.
13. **ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?**
    ಗಡಿ ಪ್ರದೇಶಗಳಲ್ಲಿ ಯುದ್ಧಕಾಲದಲ್ಲಿ ರಾತ್ರಿವೇಳೆ ಶತ್ರು ಸೈನಿಕರು ವೈಮಾನಿಕ ದಾಳಿ ಮಾಡಲು ಅವಕಾಶವಾಗದಂತೆ ವಿದ್ಯುತ್ ದೀಪ, ಬೆಂಕಿಯನ್ನು ಉರಿಸದೆ ಕತ್ತಲಿನಲ್ಲಿದ್ದು ರಕ್ಷಿಸಿಕೊಳ್ಳುವುದಕ್ಕಾಗಿ 'ಬ್ಲಾಕ್ ಔಟ್' ನಿಯಮವನ್ನು ಪಾಲಿಸಲಾಗುತ್ತದೆ.

**14. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು?**
ಕಾಶ್ಯಪಿಯು ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ತನ್ನ ಅಣ್ಣನಾದ ಹಾಗೂ ರಾಜಗೃಹದಲ್ಲಿ ಮಂತ್ರಿಯಾಗಿರುವ ಸೂರ್ಯಮಿತ್ರನ ಬಳಿಗೆ ಕಳುಹಿಸಿದಳು.

**15. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?**
ಕುದುರೆಯನ್ನು ಲವನು ತನ್ನ ಉತ್ತರೀಯದಿಂದ ಕಟ್ಟಿದನು.

**16. ದ್ರೋಣನು ಪರಶುರಾಮರ ಬಳಿಗೆ ಏಕೆ ಬಂದನು?**
ದ್ರೋಣನು ಪರಶುರಾಮನ ಬಳಿಗೆ ದ್ರವ್ಯಾರ್ಥಿಯಾಗಿ ಬಂದನು.

**17. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಬ್ರಿಟಿಷ್ ಅಧಿಕಾರಿಯ ಹೆಸರೇನು?**
ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿಯ ಹೆಸರು 'ಲೆಫ್ಟಿನೆಂಟ್ ಗೌರ್ನರ್ ಜನರಲ್ ಡಯರ್'.

## IV. ಕೆಳಗಿನ ಪ್ರಶ್ನೆಗಳಿಗೆ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10 * 2 = 20

**18. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳಾವುವು?**
ಯಾವ ನಾಡಿನಲ್ಲಿ ಶ್ರೀರಾಮನಂಥ ದೊರೆಗಳು ಆಳಿದರೋ, ಭಗವದ್ಗೀತೆಯಂಥ ಗ್ರಂಥ ಉದ್ಭವಿಸಿತೋ, ಆ ಭರತಭೂಮಿಯಲ್ಲಿ ಜನಿಸಿದ ಹುಲಿಗಳಾದರೂ ಅಧರ್ಮಕ್ಕೆಡೆಗೊಡುವುದುಂಟೇ? ಆದ್ದರಿಂದ ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಏಕೆಂದರೆ ಶತ್ರುಗಳಾದರೂ ಸರಿಯೆ, ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಆದ್ದರಿಂದ ಹುಲಿಯು ಶಾನುಭೋಗರ ಬೆನ್ನ ಹಿಂದಿನಿಂದ ಹಾರಿ ಕೊಲ್ಲಲಿಲ್ಲ.

**19. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿಯು ನಿರಾಶೆಯಿಂದ ಹೇಳಿದ ಮಾತುಗಳಾವುವು?**
ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿಯು ನಿರಾಶೆಯಿಂದ "ಇಷ್ಟು ವರ್ಷಗಳಿಂದಲೂ ಹಂಬಲಿಸಿ ಹುಟ್ಟಿದ ಮಗುವು ಕೊನೆಗೂ ದಕ್ಕಲಿಲ್ಲವಲ್ಲ? ಈ ಯುದ್ಧವಿಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೆನಲ್ಲ, ದೇವರೇ? ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತೀಯಾ?" ಎಂದು ನುಡಿದಳು.

**20. ಲಕ್ಷ್ಮಣನು ಅಣ್ಣನಾದ ರಾಮನನ್ನು ಸಂತೈಸಿದ ಬಗೆ ಹೇಗೆ?**
ಲಕ್ಷ್ಮಣನು ಸೀತೆಗಾಗಿ ಪರಿತಪಿಸುತ್ತಿದ್ದ ಅಣ್ಣನಾದ ರಾಮನನ್ನು ಕುರಿತು "ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ತೇಜಗೆಡಲು ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯಗೆಡಲು ಲೋಕಕ್ಕೆ ಸ್ಥೈರ್ಯವನ್ನು ನೀಡುವವರು ಯಾರು?" ಎಂದು ಹೇಳಿ ಸಂತೈಸಿದನು.

**21. ಶಬರಿಯು ರಾಮನ ಸ್ವಾಗತಕ್ಕಾಗಿ ಮಾಡಿಕೊಂಡಿದ್ದ ಸಿದ್ಧತೆಗಳನ್ನು ತಿಳಿಸಿ.**
ರಾಮನ ಆಗಮನದ ನಿರೀಕ್ಷೆಯಲ್ಲಿದ್ದ ಶಬರಿಯು ಅರಣ್ಯದಿಂದ ಸವಿಯಾದ ಬಗೆಬಗೆಯ ಹಣ್ಣುಗಳನ್ನು ಸಂಗ್ರಹಿಸಿ ತಂದಿಟ್ಟುಕೊಂಡಿದ್ದಳು. ಜೇನುತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು ಸಿದ್ಧಪಡಿಸಿಕೊಂಡಿದ್ದಳು. ಸುವಾಸನೆಯಿಂದ ಕೂಡಿದ ಬಾಡದ ಹೂವುಗಳನ್ನು ಆರಿಸಿ, ಮಾಲೆಯನ್ನು ಕಟ್ಟಿ ಇಟ್ಟುಕೊಂಡಿದ್ದಳು. ಹೀಗೆ ಶಬರಿಯು ರಾಮನ ಸ್ವಾಗತಕ್ಕಾಗಿ ಸಿದ್ಧತೆ ಮಾಡಿಕೊಂಡಿದ್ದಳು.

**22. ಕರ್ಣನು ಯುದ್ಧದ ವಿಚಾರದಲ್ಲಿ ಕೈಗೊಂಡ ತೀರ್ಮಾನವನ್ನು ಬರೆಯಿರಿ.**
"ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಭಾರತ ಯುದ್ಧವು ಮೃತ್ಯುದೇವತೆಗೆ ಭೋಜನ ಕೂಟ ಆಗುವುದು. ಈ ಯುದ್ಧದಲ್ಲಿ ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡುತ್ತೇನೆ. ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರನ್ನು ಕೊಲ್ಲುತ್ತೇನೆ. ನನ್ನ ಒಡೆಯನಿಗಾಗಿ ಪ್ರಾಣತ್ಯಾಗ ಮಾಡುತ್ತೇನೆ. ಆದರೆ ಸೂರ್ಯನ ಮೇಲಾಣೆ ಕೃಷ್ಣ ನಿನ್ನ ಪ್ರೀತಿಯ ಪಾಂಡವರನ್ನು ನೋಯಿಸುವುದಿಲ್ಲ" ಎನ್ನುವುದು ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವಾಗಿತ್ತು.

**23. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು?**
ದ್ರೋಣನು ಶಪಥ ಮಾಡುವಾಗ ದ್ರುಪದನನ್ನು ಕುರಿತು "ಎಲೈ ನೀಚನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು' ಎಂಬ ಗಾದೆಯಂತೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೇ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ನಾನು ಕೊಲ್ಲಲಾರೆನು. ಈ ಸಭಾ ಮಂಡಲದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಬಂಧಿಸದೆ ಬಿಟ್ಟರೆ ನಾನು ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ?" ಎಂದು ಹೇಳುತ್ತಾನೆ.

**24. ಪುಟ್ಟಪೋರಿ ಏಕೆ ಮೂಕವಿಸ್ಮಿತಳಾಗಿದ್ದಾಳೆ?**
ವಸಂತನಾಗಮನ ಕಾಲದಲ್ಲಿ ಪುಟ್ಟಿಯ ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು ಹಸುರಾದ ಎಲೆಗಳು ಮತ್ತು ಹಣ್ಣುಗಳಿಂದ ಮೈದುಂಬಿ ನಿಂತಿವೆ. ಆಕಾಶದಲ್ಲಿ ಹಕ್ಕಿಗಳು ರೆಕ್ಕೆಗಳನ್ನು ಬಿಚ್ಚಿ ಹಾರುತ್ತಿವೆ. ಮಾವಿನ ಚಿಗುರನ್ನು ತಿಂದು ಕೋಗಿಲೆಗಳು ಮನದುಂಬಿ ಹಾಡುತ್ತಿವೆ. ಕಡಲು ಉಕ್ಕಿ ಹರಿಯುತ್ತಿದೆ. ಇಳೆಯು ವಸಂತನ ಆಗಮನದ ಸಂತಸದಲ್ಲಿ ಮುಳುಗಿ ಸಂಭ್ರಮಿಸುತ್ತಿದೆ. ಮಲ್ಲಿಗೆಯ ಹೂವುಗಳು ಅರಳಿ ಮುಗುಳು ನಗೆ ಬೀರುತ್ತಿವೆ. ಮನೆಯ ಮುಂದಿನ ಹೊಳೆಯುವ ರಂಗೋಲಿಯಲ್ಲಿ ಬಾಲರವಿಯು ಥಳಥಳಿಸುತ್ತಿದ್ದಾನೆ. ಈ ದೃಶ್ಯವನ್ನು ಕಂಡು ಪುಟ್ಟಪೋರಿಯು ಮೂಕವಿಸ್ಮಿತಳಾಗಿ ಮತ್ತೆ ಮತ್ತೆ ನೋಡುತ್ತಿದ್ದಾಳೆ.

**25. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?**
ಗಾಂಧೀಜಿಯವರು ಇಂಗ್ಲೆಂಡಿಗೆ ಹೋಗುವವರೆಗೂ "ಅಂದವಾದ ಅಕ್ಷರ; ಒಳ್ಳೆಯ ಬರೆವಣಿಗೆ; ಶಿಕ್ಷಣದ ಆವಶ್ಯಕ ಅಂಶವಲ್ಲ" ಎಂದು ಭಾವಿಸಿದ್ದರು. ನಂತರ ದಕ್ಷಿಣ ಆಫ್ರಿಕಾಕ್ಕೆ ಹೋದ ಮೇಲೆ ಅಲ್ಲಿ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತು ಪೋಣಿಸಿದಂತಿದ್ದ ಸುಂದರ ಬರೆವಣಿಗೆಯನ್ನು ನೋಡಿ, ಅವರಿಗೆ ನಾಚಿಕೆಯೂ ಪಶ್ಚಾತ್ತಾಪವೂ ಆಯಿತು. ಆಗ ಅವರು "ಕೆಟ್ಟ ಅಕ್ಷರದ ಬರೆವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ" ಎಂದು ಅರಿತುಕೊಂಡು, ತಮ್ಮ ಬರಹವನ್ನು ತಿದ್ದಿಕೊಳ್ಳಲು

ಪ್ರಯತ್ನಿಸಿದರಾದೂ, ಅದು ಸಾಧ್ಯವಾಗಲಿಲ್ಲ. ಆಗ ಗಾಂಧೀಜಿಯವರು ನನ್ನ ಉದಾಹರಣೆಯಿಂದ "ಒಳ್ಳೆಯ ಬರವಣಿಗೆ ಉತ್ತಮ ಶಿಕ್ಷಣದ ಆವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ ಯುವತಿಯೂ ತಿಳಿದುಕೊಳ್ಳಲಿ" ಎಂದು ಹೇಳಿದರು.

**26. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ?**

ಚಂದನವ ಕಡಿದು ಕೊರೆದು ತೇದರೆ ಅದು ನೊಂದೆನೆಂದು ತನ್ನ ಕಂಪನ್ನು ಬಿಡದಂತೆ; ಸುವರ್ಣವನ್ನು ಕಡಿದು ಒರೆದು ಬೆಂದರೂ ಅದು ಕಪ್ಪಾಗದೆ ಹೊಳೆಯುವಂತೆ; ಕಬ್ಬನ್ನು ಸಂದು ಸಂದುಗಳಲ್ಲಿ ಕಡಿದು ತಂದು ಗಾಣದಲ್ಲಿ ಹಾಕಿ ಅರೆದರೆ ಅದು ಬೆಂದು ಪಾಕವಾಗಿ ಸಕ್ಕರೆಯಾಗುವಂತೆ, ಚೆನ್ನಮಲ್ಲಿಕಾರ್ಜುನಯ್ಯಾ ನಾನು ಹಿಂದೆ ಮಾಡಿದ ಪಾಪಕೃತ್ಯಗಳನ್ನು ತಂದು ಮುಂದಿಟ್ಟರೆ ಅದರಿಂದ ನಿಮಗೆ ಹಾನಿ, ನೀವು ನನ್ನನ್ನು ಕೊಂದರೂ ಸಹ ನಾನು ನಿಮಗೆ ಶರಣೆಂಬುದನ್ನು ಬಿಡುವುದಿಲ್ಲ. ಹೀಗೆ ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ವ್ಯಕ್ತಗೊಂಡಿದೆ.

**27. ಶುಕನಾಸನು ತಿಳಿಸಿರುವಂತೆ ರಾಜರ ಪ್ರಕೃತಿಯನ್ನು ಕುರಿತು ಬರೆಯಿರಿ.**

ಶುಕನಾಸನು ತಿಳಿಸಿರುವಂತೆ ರಾಜರ ಪ್ರಕೃತಿ ಹೇಗಿರುತ್ತದೆಂದರೆ "ರಾಜರಿಗೆ ಅಹಂಕಾರದ ದಾಹಜ್ವರ ತಲೆಗಡರಿರುತ್ತದೆ. ಅಹಂಕಾರದ ದಾಹಜ್ವರದಿಂದ ರಾಜರ ಮನಸ್ಸಿನಲ್ಲಿ ಕತ್ತಲೆ ತುಂಬಿರುತ್ತದೆ. ತಮ್ಮ ಬಳಿ ಇರುವ ದುಡ್ಡಿನ ಮಹಿಮೆಯಿಂದ ರಾಜರಿಗೆ ಅಹಂಕಾರ ಬರುತ್ತದೆ. ದುಡ್ಡು ದುರಭಿಮಾನದ ತವರು. ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ರಾಜ್ಯ ಎನ್ನುವುದು ಒಂದು ವಿಷವಿದ್ದಂತೆ; ಅದರ ಅಧಿಕಾರದ ಸೋಂಕು ತಾಗಿದವರಿಗೆಲ್ಲ ಬುದ್ಧಿ ಮಂಕಾಗಿಬಿಡುತ್ತದೆ."

## V. ಕೆಳಗಿನ ಕವಿ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 * 3 = 6

**28. ದೇವನೂರ ಮಹಾದೇವ**

**ಶ್ರೀ ದೇವನೂರು ಮಹಾದೇವ** ಅವರು **ಕ್ರಿ. ಶ. 1948** ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ **ದೇವನೂರಿನಲ್ಲಿ** ಜನಿಸಿದರು. ಇವರು ಬಂಡಾಯ ಮತ್ತು ದಲಿತ ಸಾಹಿತ್ಯದ ಪ್ರಮುಖ ಲೇಖಕರಲ್ಲಿ ಒಬ್ಬರಾಗಿದ್ದಾರೆ. ಇವರು ಆಡುಮಾತಿನ ಧ್ವನಿಶಕ್ತಿಯನ್ನು ಎತ್ತರಿಸಿದ 'ಶಬ್ದಶಿಲ್ಪಿ'. ಇವರು **ಎದೆಗೆ ಬಿದ್ದ ಅಕ್ಷರ**. ಕುಸುಮ ಬಾಲೆ, ದ್ಯಾವನೂರು, ಒಡಲಾಳ, ಗಾಂಧಿ ಮತ್ತು ಮಾವೋ, ನಂಬಿಕೆಯ ನಂಟ, ನೋಡು ಮತ್ತು ಕೂಡು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರ 'ಒಡಲಾಳ' ಕೃತಿಗೆ ಭಾರತೀಯ ಭಾಷಾ ಪರಿಷತ್ ಪ್ರಶಸ್ತಿಯನ್ನು ಹಾಗೂ 'ಕುಸುಮಬಾಲೆ' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯು ದೊರೆತಿದೆ.

**29. ಲಕ್ಷ್ಮೀಶ**

**ಕವಿ ಲಕ್ಷ್ಮೀಶ ಅವರು ಕ್ರಿ. ಶ. ಸುಮಾರು 1550** ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ **ದೇವನೂರಿನಲ್ಲಿ** ಜೀವಿಸಿದ್ದರು. ಇವರಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇದ್ದವು. ಇವರು **'ಜೈಮಿನಿ ಭಾರತ'** ಎಂಬ ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾರೆ. ಇವರಿಗೆ **ಉಪಮಾಲೋಲ, ಕರ್ನಾಟ ಕವಿಚೂತವನ ಚೈತ್ರ** ಎಂಬ ಬಿರುದುಗಳನ್ನು ನೀಡಿ ಗೌರವಿಸಲಾಗಿದೆ.

## VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 * 3 = 3

**30. ಭಾನುವೆ ಸಾಲದೆ ಪಗಲೆನಿ**

**ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ ।**

| | | |
|---|---|---|
| 4 | 4 | 4 |
| — ∪ ∪ | — ∪ ∪ | ∪∪∪∪ |
| ಭಾನುವೆ | ಸಾಲದೆ | ಪಗಲೆನಿ |

| | | | | |
|---|---|---|---|---|
| 4 | 4 | 4 | 4 | 4 |
| — — | — ∪ ∪ | ∪ ∪ ∪ ∪ | — — | ∪ ∪ — |
| ತಾನುಂ | ದೀವಿಗೆ | ಗಳುರಿದೊ | ಡೇಂ ನಂ | ದಿದೊಡೇಂ |

ಈ ಮೇಲಿನ ಪದ್ಯವು ಮಾತ್ರಾಗಣದ **'ಕಂದ ಪದ್ಯ'**ದಲ್ಲಿ ರಚಿತವಾಗಿದೆ.

## VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1 * 3 = 3

**31. "ನನ್ನ ಧೈರ್ಯದ ಭೂಮಿ ಕಾಲಡಿಯೆ ಕುಸಿಯುತಿದೆ."**

**ಅಲಂಕಾರ** : ರೂಪಕಾಲಂಕಾರ

**ಲಕ್ಷಣ** : ಉಪಮೇಯ ಉಪಮಾನಗಳಿಗೆ ಭೇದವು ಕಂಡು ಬರದೆ ಅವೆರಡು ಒಂದೇ ಎಂದು ಹೋಲಿಸಿ ವರ್ಣಿಸಿದರೆ ಅದು **'ರೂಪಕಾಲಂಕಾರ'**.

**ಉಪಮೇಯ** : ಧೈರ್ಯ

**ಉಪಮಾನ** : ಭೂಮಿ

**ಸಮನ್ವಯ** : ಇಲ್ಲಿ ಉಪಮೇಯವಾದ ಧೈರ್ಯಕ್ಕೂ ಉಪಮಾನವಾದ ಭೂಮಿಗೂ ಯಾವುದೇ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಲಾಗಿದೆ. ಆದ್ದರಿಂದ ಈ ವಾಕ್ಯವು ರೂಪಕಾಲಂಕಾರಕ್ಕೆ ಉದಾಹರಣೆಯಾಗಿದೆ.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 * 3 = 3**

**32. ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ.**

'ಗಾದೆಗಳು ವೇದಗಳಿಗೆ ಸಮಾನ' ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** ಎಂಬುವ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ **'ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ'** ಎಂಬ ಗಾದೆಯೂ ಸಹ ಒಂದಾಗಿದೆ.

ಕೆಲವು ಬಾರಿ ಅನಿರೀಕ್ಷಿತವಾಗಿ ಆಗಬೇಕಾದ ಕೆಲಸಕ್ಕೆ ಬದಲಾಗಿ ಇನ್ನೇನೋ ಆಗುವ ಸಂಭವವಿದೆ. ಹಾಗಾದಾಗ ಅದಕ್ಕಾಗಿ ಯೋಚಿಸಿದರೆ, ತಲೆಕೆಡಿಸಿಕೊಂಡರೆ ಏನು ಪ್ರಯೋಜನವಿಲ್ಲ ಎಂದು ಈ ಗಾದೆಯು ತಿಳಿಸುತ್ತದೆ. ವರ್ಷವೆಲ್ಲಾ ಓದಿ, ಪರೀಕ್ಷೆಗಾಗಿ ಸರ್ವಸಿದ್ಧತೆಯನ್ನು ಮಾಡಿಕೊಂಡಿರುವ ವಿದ್ಯಾರ್ಥಿಗೆ ಪರೀಕ್ಷೆಯ ಸಮಯಕ್ಕೆ ಸರಿಯಾಗಿ ವಿಷಮಶೀತಜ್ವರ ರೋಗ ಬಂದು ಪರೀಕ್ಷೆಗೆ ಹೋಗಲಾಗದಿದ್ದರೆ ಅವನಿಗೆ ಬಹಳ ವ್ಯಥೆಯಾಗುವುದು ಸಹಜ. ಆದರೆ ಇದಕ್ಕೆ ಚಿಂತಿಸಿ ಫಲವಿಲ್ಲ. ಮುಂದಿನ ದಾರಿಯನ್ನು ಕಂಡುಕೊಳ್ಳಬೇಕು. ಆರೋಗ್ಯ ಸರಿಯಾದ ಮೇಲೆ ಮತ್ತೆ ಪರೀಕ್ಷೆಯನ್ನು ಬರೆಯುವ ಸಿದ್ಧತೆಮಾಡಿಕೊಳ್ಳಬೇಕು. ಚಿತಗೂ ಚಿಂತೆಗೂ ಒಂದು ಸೊನ್ನೆ ಮಾತ್ರ ವ್ಯತ್ಯಾಸ. ಚಿತೆಯು ನಿರ್ಜೀವವಾದ ಶವವನ್ನು ಸುಟ್ಟರೆ; ಚಿಂತೆಯು ಸಜೀವವಾದ ವ್ಯಕ್ತಿಯನ್ನು ಕೊಲ್ಲುತ್ತದೆ. ಕೆಲವೊಮ್ಮೆ ನಮ್ಮ ತಪ್ಪಿನಿಂದ; ಕೆಲವೊಮ್ಮೆ ನಮ್ಮದಲ್ಲದ ತಪ್ಪಿನಿಂದ ಆಗಬಾರದ್ದು ಆಗಿಬಿಡುತ್ತದೆ. ಆಗ ಚಿಂತಿಸುವುದರಿಂದ ಪ್ರಯೋಜನವಿಲ್ಲ; ಧೈರ್ಯದಿಂದ, ಸಹನೆಯಿಂದ ಉಂಟಾಗುವ ಸನ್ನಿವೇಶಗಳನ್ನು ಎದುರಿಸಬೇಕು ಎನ್ನುವುದೇ ಈ ಗಾದೆಯ ಅರ್ಥವಾಗಿದೆ.

**ಅಥವಾ**

**ಆಳಾಗಬಲ್ಲವನು; ಅರಸಾಗಬಲ್ಲನು.**

'ಗಾದೆಗಳು ವೇದಗಳಿಗೆ ಸಮಾನ' ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** ಎಂಬುವ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ **'ಆಳಾಗಬಲ್ಲವನು; ಅರಸಾಗಬಲ್ಲನು'** ಎಂಬ ಗಾದೆಯೂ ಸಹ ಒಂದಾಗಿದೆ.

ಕಾಯಕದ ಘನತೆಯನ್ನು ಬಡವರು ಶ್ರೀಮಂತರೆನ್ನದೆ ತಿಳಿದು ಕೊಳ್ಳಬೇಕಾಗಿರುವುದು ಅಗತ್ಯ. ತಾನು ಪುರುಷ, ಗೃಹಕೃತ್ಯಗಳನ್ನು ಮಾಡುವುದು ಅವಮಾನ, ಎರಡು ಪದವಿಗಳನ್ನು ಪಡೆದಿರುವವನು, ಹಳ್ಳಿಯಲ್ಲಿ ಕೃಷಿ ಮಾಡುವುದು ಅವಮಾನ – ಎಂಬಂಥ ಧೋರಣೆ ಸರಿಯಲ್ಲ. ಸಾಮಾನ್ಯ ಮನುಷ್ಯ ತನ್ನ ದುಡಿಮೆಯ ಬಲದಿಂದ ಎತ್ತರಕ್ಕೆ ಏರಿರುವ ಉದಾಹರಣೆಗಳು ಸಾಕಷ್ಟಿವೆ. ಆಳಿನ ದುಡಿಮೆ ಸಮಸ್ಯೆ ಸ್ಥಿತಿಗತಿಗಳನ್ನು ಸ್ವತಃ ಅವರೊಂದಿಗೆ ಬೆರೆತು ಅರ್ಥಮಾಡಿಕೊಂಡರಷ್ಟೇ ಅರಸ ಅದನ್ನು ಪರಿಹರಿಸಲು ಸಾಧ್ಯ. 'ಆಳಾಗಿ ದುಡಿ; ಅರಸಾಗಿ ಮೆರೆ' ಎಂಬ ಮಾತು ಈ ಗಾದೆಯ ಮಾತನ್ನು ಸಮರ್ಥಿಸುತ್ತದೆ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 * 3 = 18**

**33. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು."**

**ಆಯ್ಕೆ :** ಈ ವಾಕ್ಯವನ್ನು ಶ್ರೀ ಡಿ. ಎಸ್. ಜಯಪ್ಪಗೌಡ ಅವರು ರಚಿಸಿರುವ 'ದಿವಾನ್ ಸರ್. ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಸಂಶೋಧನಾ ಗ್ರಂಥದಿಂದ ಆಯ್ದ 'ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :** ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು "ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಈ ಮಾತನ್ನು ಸರ್. ಎಂ. ವಿಶ್ವೇಶ್ವರಯ್ಯ ಅವರು ಹೇಳಿದ್ದಾರೆ.

**ಸ್ವಾರಸ್ಯ :** ಸರ್. ಎಂ. ವಿಶ್ವೇಶ್ವರಯ್ಯ ಅವರು "ಒಂದು ರಾಜ್ಯ ಪ್ರಗತಿಯ ಪಥದಲ್ಲಿ ಸಾಗಬೇಕಾದರೆ ಅಲ್ಲಿ ವಾಸಿಸುವ ಪ್ರತಿಯೊಬ್ಬರು ಶಿಕ್ಷಣ ಪಡೆಯಬೇಕು; ಜನರನ್ನು ಸುಶಿಕಿತರನ್ನಾಗಿಸಲು ಶಿಕ್ಷಣ ಅತ್ಯಗತ್ಯ. ಯಾವುದೇ ತಾರತಮ್ಯವಿಲ್ಲದೆ ಇದು ಎಲ್ಲ ಜನರಿಗೂ ದೊರೆಯಬೇಕು." ಎಂಬುದನ್ನು ಈ ಮಾತಿನ ಮೂಲಕ ಶಿಕ್ಷಣದ ಮಹತ್ತ್ವವನ್ನು ಬಹುಸ್ವಾರಸ್ಯವಾಗಿ ಅಭಿವ್ಯಕ್ತಪಡಿಸಿದ್ದಾರೆ.

**34. "ಮನುಷ್ಯನಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ."**

**ಆಯ್ಕೆ :–** ಈ ವಾಕ್ಯವನ್ನು ವಿ.ಕೃ. ಗೋಕಾಕ್ ಅವರು ರಚಿಸಿರುವ 'ಸಮುದ್ರದಾಚೆಯಿಂದ' ಎಂಬ ಪ್ರವಾಸಕಥನದಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಲೇಖಕರು ಲಂಡನ್ ನಗರದಲ್ಲಿ ಪ್ರವಾಸವನ್ನು ಮಾಡುವಾಗ ಅಲ್ಲಿನ ಹೆಣ್ಣುಮಕ್ಕಳು ಧರಿಸಿರುವ ಟೊಪ್ಪಿಗೆಯನ್ನು ಬಹುಕುತೂಹಲದಿಂದ ನೋಡುತ್ತಾರೆ. "ಒಂದು ಟೊಪ್ಪಿಗೆಯಂತೆ ಇನ್ನೊಂದು ಇರುವುದಿಲ್ಲ ಸಿಕ್ಕಿಸಿದ ಕುಚ್ಚವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ! ಕೋಟ್ಯಾವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೆ? ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಈ ಮಾತನ್ನು ಲೇಖಕರು ಹೇಳುತ್ತಾರೆ.

**ಸ್ವಾರಸ್ಯ :** ಲಂಡನ್ ನಗರದ ಹೆಣ್ಣು ಮಕ್ಕಳ ಸೌಂದರ್ಯ ಪ್ರೇಮ, ಆಯ್ಕೆಯಲ್ಲಿರುವ ವೈವಿಧ್ಯತೆಯ ಮನೋಭಾವವು ಹಾಗೂ ಲೇಖಕರ ಸೂಕ್ಷ್ಮ ವೀಕ್ಷಣಾ ಚಾತುರ್ಯವು ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

35. **“ಕಣ್ಣ ನೀರಂ ತೀವಿ ನೆಲನಂ ಬರೆಯುತ್ತಿರೆ.”**

**ಆಯ್ಕೆ :** ಈ ವಾಕ್ಯವನ್ನು ಶಿವಕೋಟ್ಯಾಚಾರ್ಯ ಅವರು ರಚಿಸಿರುವ ಕನ್ನಡದ ಪ್ರಥಮ ಗದ್ಯಕೃತಿಯಾದ ‘ವಡ್ಡಾರಾಧನೆ’ ಎನ್ನುವ ಕೃತಿಯಿಂದ ಆಯ್ದ ‘ಅಗ್ನಿಭೂತಿ ವಾಯುಭೂತಿಯರ ಕಥೆ’ ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಕೌಶಂಬಿ ಪಟ್ಟಣದ ಅರಸನಾದ ಅತಿಬಲನು ತನ್ನ ಮಂತ್ರಿಯಾಗಿದ್ದ ಸೋಮಶರ್ಮನು ಮರಣಹೊಂದಿದ ಕೆಲವು ದಿನಗಳ ನಂತರ ದೂತರನ್ನು ಕಳುಹಿಸಿ ಅವನ ಮಕ್ಕಳಾದ ಅಗ್ನಿಭೂತಿ ಮತ್ತು ವಾಯುಭೂತಿಯರನ್ನು ರಾಜಸಭೆಗೆ ಕರೆಯಿಸಿಕೊಂಡನು. ರಾಜಸಭೆಯಲ್ಲಿ ರಾಜನು ಅವರನ್ನು ಕುರಿತು “ನೀವು ಯಾವ ವಿದ್ಯೆಗಳನ್ನು ಬಲ್ಲಿರಿ?” ಎಂದು ಕೇಳಿದ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** “ಅಗ್ನಿಭೂತಿ ವಾಯುಭೂತಿಯರು ಸಪ್ತವ್ಯಸನಗಳಿಗೆ ಬಲಿಯಾಗಿ ವಿದ್ಯಾರ್ಜನೆಯನ್ನು ಮಾಡದಿದ್ದ ತಪ್ಪಿಗಾಗಿ ನೊಂದು ನಾಚಿಕೆಯಿಂದ ತಲೆತಗ್ಗಿಸಿದರು” ಎನ್ನುವುದನ್ನು ಕವಿಗಳು ಈ ಮಾತಿನ ಮೂಲಕ ಅಭಿವ್ಯಕ್ತಪಡಿಸಿದ್ದಾರೆ.

36. **“ಹೊಸ ಎಚ್ಚರದೊಳು ಬದುಕೋಣ.”**

**ಆಯ್ಕೆ :** ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **‘ಎದೆತುಂಬಿ ಹಾಡಿದೆನು’** ಕವನ ಸಂಕಲನದಿಂದ ಆಯ್ದ **‘ಸಂಕಲ್ಪಗೀತೆ’** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :** ಕವಿಗಳು “ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು” ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** “ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು” ಎಂದು ಕವಿಗಳು **ಸ್ವಾರಸ್ಯಪೂರ್ಣವಾಗಿ** ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

37. **“ಕೌಂತೇಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ.”**

**ಆಯ್ಕೆ :** ಈ ವಾಕ್ಯವನ್ನು **‘ಕುಮಾರವ್ಯಾಸ’** ಎಂದು ಪ್ರಸಿದ್ಧರಾದ **ಗದುಗಿನ ನಾರಣಪ್ಪ ಅವರು** ರಚಿಸಿರುವ **‘ಕರ್ಣಾಟ ಭಾರತ ಕಥಾಮಂಜರಿ’ ಎಂಬ** ಮಹಾಕಾವ್ಯದ ಉದ್ಯೋಗ ಪರ್ವದಿಂದ ಆಯ್ದ **‘ಕೌರವೇಂದ್ರನ ಕೊಂದೆ ನೀನು’** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುತ್ತ “ನಿನಗೆ ಹಸ್ತಿನಾಪುರದ ಚಕ್ರವರ್ತಿಯನ್ನಾಗಿ ಮಾಡುತ್ತೇನೆ” ಎಂದು ಆಮಿಷವನ್ನೊಡ್ಡಿದ ಸಂದರ್ಭದಲ್ಲಿ ಕರ್ಣನು ಕೃಷ್ಣನಿಗೆ “ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು, ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ ಕೊಂದೆ” ಎಂದು ಹೇಳುತ್ತಾನೆ.

**ಸ್ವಾರಸ್ಯ :** “ಕರ್ಣನ ಸ್ವಾಮಿನಿಷ್ಠೆಯ ಮುಂದೆ ಶ್ರೀಕೃಷ್ಣನ ಪ್ರಲೋಭನೆ ಹೇಗೆ ವ್ಯರ್ಥಗೊಂಡಿತು ಎನ್ನುವುದು ಮತ್ತು ‘ನಿರ್ದಿಷ್ಟ ಗುರಿಸಾಧನೆಗೆ ವಿವಿಧ ಭಾವನಾತ್ಮಕ ತಡೆಗೋಡೆಗಳು ಉದಿಸಿದರೂ ಅದನ್ನು ಮೀರಿ ಸಾಗುವ ಛಲವನ್ನು ಹೊಂದಿರಬೇಕು’ ಎಂಬ ಮೌಲ್ಯಯುತ ಸಂದೇಶವು ಇಲ್ಲಿ ಬಹುಸ್ವಾರಸ್ಯವಾಗಿ ಅಭಿವ್ಯಕ್ತಗೊಂಡಿದೆ.

38. **“ಬೇರೆ ಬಣ್ಣವನೆ ಕಾಣೆ.”**

**ಆಯ್ಕೆ :–** ಈ ವಾಕ್ಯವನ್ನು **‘ಕುವೆಂಪು’** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅವರು ರಚಿಸಿರುವ **‘ಪಕ್ಷಿಕಾಶಿ’** ಕವನ ಸಂಕಲನದಿಂದ ಆಯ್ದ **‘ಹಸುರು’** ಎಂಬ ಕವನದಿಂದ ಆರಿಸಲಾಗಿದೆ.

**ಸಂದರ್ಭ :–** ಕುವೆಂಪು ಅವರು ಕುಪ್ಪಳ್ಳಿಯ ಕವಿಶೈಲದಲ್ಲಿ ಆಶ್ವಯುಜ ಮಾಸದ ನವರಾತ್ರಿಯಲ್ಲಿ ಕುಳಿತು, ಆನಂದದಿಂದ ಸವಿದ ಪ್ರಕೃತಿಯ ಹಚ್ಚಹಸುರಿನ ಸೌಂದರ್ಯದ ವರ್ಣನೆಯನ್ನು ಮಾಡುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** “ಆಶ್ವಯುಜ ಮಾಸದ ನವರಾತ್ರಿಯಲ್ಲಿ ಮಲೆನಾಡಿನಲ್ಲಿ ಭೂಮಿಯ ತುಂಬ ಹೊಸ ಹಸುರು ಬಣ್ಣದ ಮಕಮಲ್ಲಿನ ಜಮಖಾನೆಯನ್ನು ಹರಡಿಸಿ, ಭೂದೇವಿಯ ಮೈಮುಚ್ಚಿದಂತೆ ಕಾಣುತ್ತಿದೆ. ಆದ್ದರಿಂದ ಇಲ್ಲಿ ಬೇರೆ ಬಣ್ಣಗಳು ಕಾಣುತ್ತಿಲ್ಲ” ಎಂಬುದನ್ನು ಈ ನುಡಿ ಅರ್ಥಪೂರ್ಣವಾಗಿ ಅಭಿವ್ಯಕ್ತಪಡಿಸುತ್ತದೆ.

## X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 * 4 = 4

39. ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣಿ ಹಾಲಾ
ಉಪ್ಪು ಎಣ್ಣಿ ಅರಿಸಿಣ ಜೀರಿಗಿ ಅಕ್ಕಿ ಸಕ್ಕಾರಿ ಬೆಲ್ಲಾ
ಗಂಗಳ ಚೆರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

**ಅಥವಾ**

ಸಿಕ್ಕದ್ದು ತಗೊಂಡು ಸರದ ನಿಂತರೊ ಊರಿಗೆ ಕೊಳ್ಳಿ ಕೊಟ್ಟಾ
ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟು
ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು
ಕುರ್ತಕೋಟಿ ಕಲ್ಮೇಶನ ದಯದಿಂದ ಹಾಡಿದೆನಣ್ಣಾ ಜನಕಾ.

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ. 1 * 4 = 4**

**40. ಯುಗ-ಯುಗಗಳ ಹಣೆ ಬರೆಹವ ಒರಸಿ**
**ಮನ್ವಂತರಗಳ ಭಾಗ್ಯವ ತೆರೆಸಿ**
**ರೆಕ್ಕೆಯ ಬೀಸುತ ಚೇತನಗೊಳಿಸಿ**
**ಹೊಸಗಾಲದ ಹಸುಮಕ್ಕಳ ಹರಸಿ**
**ಹಕ್ಕಿ ಹಾರುತಿದೆ ನೋಡಿದಿರಾ?**

**ವರಕವಿ ದ. ರಾ. ಬೇಂದ್ರೆ** ಅವರು ರಚಿಸಿರುವ **'ಗರಿ'** ಕವನಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಪದ್ಯದಲ್ಲಿ ಚಲನಶೀಲವಾದ ಕಾಲವನ್ನು ಹಾರುತ್ತಿರುವ ಹಕ್ಕಿಗೆ ಹೋಲಿಸಿ ವರ್ಣಿಸಲಾಗಿದೆ.
ಈ ಚರಣದಲ್ಲಿ ಕವಿಗಳು ಕಾಲಪಕ್ಷಿಯು ಯುಗಯುಗದಲ್ಲೂ ಜನರಿಗೆ ಚೈತನ್ಯವನ್ನು ತುಂಬಿ ಮುಂದಿನ ಜನಾಂಗವನ್ನು ಹರಸುತ್ತಿದೆ ಎಂದು ವರ್ಣಿಸುತ್ತಾರೆ. ಕಾಲಪಕ್ಷಿಯು ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ / ಪ್ರಗತಿಗೆ ಕಾರಣವಾಗಿದೆ. ಕಾಲಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಮುಂದಿನ ಜನಾಂಗದ ಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂದು ಕವಿಗಳು ವರ್ಣಿಸುತ್ತಾರೆ.
**ಚಲನಶೀಲವಾದ ಕಾಲದ ಮಹತ್ತ್ವವನ್ನು ಅರಿತು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳುವ ಆಶಯವು ಈ ಪದ್ಯದಲ್ಲಿ ಕಂಡುಬರುವ ಮೌಲ್ಯವಾಗಿದೆ.**

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 * 4 = 8**

**41. ಭಾಷೆ ಸತ್ತ್ವಪೂರ್ಣವಾಗಿ ಹೇಗೆ ವಿಕಾಸಗೊಳ್ಳುತ್ತದೆ? ವಿವರಿಸಿ.**

ಒಂದು ಭಾಷೆಯನ್ನಾಡುವ ಜನರು ಅಭಿಮಾನಧನರೂ, ಬುದ್ಧಿಶಾಲಿಗಳೂ, ಪ್ರಯೋಗಶೀಲರೂ ಆದಾಗ ಆ ಭಾಷೆಯು ಸತ್ತ್ವಪೂರ್ಣವಾಗಿ ವಿಕಾಸಗೊಳ್ಳುವುದು. ಭಾಷಾ ಪಂಡಿತರು ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಮುಕ್ತಮನಸ್ಸಿನಿಂದ ಅಭ್ಯಾಸ ಮಾಡಿ, ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಬೆಳೆಸಬೇಕು, ಅರಳಿಸಬೇಕು. ಎಲ್ಲಕ್ಕೂ ಮೇಲಾಗಿ ಮಹಾ ಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆಗಳನ್ನು, ವಿಚಾರಗಳನ್ನು ತಮ್ಮ ಭಾಷೆಯ ಮೂಲಕವೇ ಹೇಳಬೇಕೆಂಬ ಉಜ್ಜ್ವಲವಾದ ಅಭಿಮಾನವುಳ್ಳವರಾಗಿರಬೇಕು. ಆ ನಾಡಿನ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದರೆ ಆಗ ಆ ಭಾಷೆಯು ಪರಿಣಾಮಕಾರಿಯಾಗಿ ಬೆಳೆಯುತ್ತದೆ. ಇದಕ್ಕೆ ಆ ಭಾಷೆಯನ್ನಾಡುವ ಜನರ ಸಂಕಲ್ಪ ಮತ್ತು ಕೃಷಿ ದೃಢವಾಗಿರಬೇಕು. ಸ್ವಭಾಷೆಯನ್ನು ಪ್ರೀತಿಸಬೇಕು; ಪರಭಾಷೆಯನ್ನು ಗೌರವಿಸಬೇಕು. ಭಾಷೆಗಳಲ್ಲಿ ಮೇಲು-ಕೀಳು ಎಂಬುದಿಲ್ಲ. ನಾಲ್ಕು ಜನರು ಮಾತನಾಡುವ ಭಾಷೆಗೂ, ನಲವತ್ತು ಲಕ್ಷ ಜನ ಮಾತನಾಡುವ ಭಾಷೆಗೂ ಸತ್ತ್ವದ ದೃಷ್ಟಿಯಿಂದ ಅಂತರವೇ ಇಲ್ಲ. ಒಬ್ಬ ತಾಯಿಯ ಗಾನದ ಶ್ರುತಿಯಂತೆ ಎಲ್ಲಕ್ಕೂ ಸಮಾನ ಸ್ಥಾನವಿದೆ.

**ಅಥವಾ**

**ಕನ್ನಡ ಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆ ಹೇಗೆ? ವಿವರಿಸಿ.**

ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದರು. ಅಂಥವರ ವಾಣಿಯಿಂದ ಕನ್ನಡದ ವೀಣೆ ಮೃದುಮಧುರವಾಗಿ ಮಿಡಿಯಿತು. ಬಸವೇಶ್ವರ, ಅಲ್ಲಮಪ್ರಭುಗಳಂತಹ ಶರಣವರೇಣ್ಯರು, ಚಾಮರಸ, ಕುಮಾರವ್ಯಾಸರಂತಹ ಕವಿಪುಂಗವರು, ಪುರಂದರದಾಸ, ಕನಕದಾಸರಂತಹ ದಾಸಶ್ರೇಷ್ಠರು ತಮ್ಮ ತಮ್ಮ ಅನುಭವಸಾರವನ್ನು ಸುಲಭವೂ, ಸುಂದರವೂ, ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ನೆರೆಹೊರೆಯ ಭಾಷೆಗಳಿಂದ ಕೊಳುಕೊಡುಗೆ ವ್ಯವಹಾರ ನಡೆಯುವುದು ಸಜೀವ ಭಾಷೆಯ ಲಕ್ಷಣ. ಕನ್ನಡವು ನೆರೆಹೊರೆ ಭಾಷೆಗಳಿಂದ ಪದಗಳನ್ನು ಸ್ವೀಕರಿಸುವಾಗ ತನ್ನತನವನ್ನು ಕಳೆದುಕೊಳ್ಳದಂತೆ ಎಚ್ಚರಿಕೆವಹಿಸಿದೆ. ಕನ್ನಡ ಭಾಷೆಯು ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಂದ ತತ್ಸಮ-ತದ್ಭವಗಳಾಗಿ ಅನೇಕ ಶಬ್ದಗಳನ್ನು ತನ್ನಲ್ಲಿ ಅಳವಡಿಸಿಕೊಂಡಿತು. ಮಹಮ್ಮದೀಯರ ಕಾಲದಲ್ಲಿ ಪರ್ಷಿಯನ್ ಭಾಷೆಯ ಶಬ್ದಗಳು ಕನ್ನಡಕ್ಕೆ ಬಂದು ಸೇರಿಕೊಂಡವು. ಇಂಗ್ಲಿಷ್, ಪೋರ್ಚುಗೀಸ್ ಭಾಷೆಗಳಿಂದಲೂ ಅನೇಕ ಶಬ್ದಗಳು ಕನ್ನಡ ಭಾಷೆಗೆ ಎರವಲು ಶಬ್ದಗಳಾಗಿ ಬಂದು ಸೇರಿಕೊಂಡವು. ಕನ್ನಡನಾಡಿನ ನೆರೆಹೊರೆ ಗಡಿ ಪ್ರದೇಶಗಳಲ್ಲಿ ತಮಿಳು, ತೆಲುಗು, ಮಲೆಯಾಳ, ಮರಾಠಿ ಭಾಷೆಗಳಿಂದ ಕೊಳುಕೊಡುಗೆ ನಡೆಯುವುದರಿಂದ ಕನ್ನಡವೂ ಅದರ ನೆರೆಹೊರೆನುಡಿಗಳೂ ಪರಸ್ಪರ ಎರವುಗಳಿಂದ ಅಭಿವೃದ್ಧಿ ಹೊಂದುತ್ತಲಿವೆ. ಎರಡು ಅಥವಾ ಹೆಚ್ಚು ಶಬ್ದಗಳು ಸೇರಿ ಒಂದು ನುಡಿಗಟ್ಟಾಗಿ ಅದಕ್ಕೊಂದು ನವೀನಾರ್ಥ ಬಂದು, ಅಂದವಾದ ನುಡಿಗಟ್ಟುಗಳಿಂದ ಕನ್ನಡ ಭಾಷೆಯು ಸಮೃದ್ಧಗೊಳ್ಳುತ್ತಿದೆ. ಹೀಗೆ ಕನ್ನಡ ಭಾಷೆ ಸಮೃದ್ಧವಾಗಿ ರೂಪುಗೊಂಡದ್ದರಿಂದ ಅದು ಸುಲಿದ ಬಾಳೆಯ ಹಣ್ಣಿನಂತೆ, ಸಿಗುರು ತೆಗೆದ ಕಬ್ಬಿನಂತೆ, ಉಷ್ಣ ಅಳಿದ ಹಾಲಿನಂತೆ ಸುಲಭವೂ ರುಚಿಯುಳ್ಳದ್ದೂ ಆಗಿದೆ ಎಂದು ಕವಿ ಮಹಲಿಂಗರಂಗನು ಉದ್ಘೋಷಿಸಲು ಸಾಧ್ಯವಾಯಿತು.

**42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ಕುರಿತು ವಿವರಿಸಿ.**

ಭೀಷ್ಮನು ದುರ್ಯೋಧನನನ್ನು ಕುರಿತು " ನೀನು ಒಪ್ಪಿಕೊಳ್ಳುವುದಾದರೆ ಪಾಂಡವರನ್ನು ಒಪ್ಪಿಸಿ, ಸಂಧಿಯನ್ನು ಮಾಡಿ, ಮೊದಲಿನಂತೆಯೇ ಅವರು ನಡೆಯುವ ಹಾಗೆ ಮಾಡುವೆನು. ಇನ್ನು ಅವರು ನಾವು ಹೇಳಿದುದನ್ನು ಒಪ್ಪಿಕೊಳ್ಳದೇ ಮಾತನ್ನು ಮೀರುವವರಲ್ಲ, ನೀನೂ ಕೂಡ ನಾವು ಹೇಳಿದುದನ್ನು ಮೀರದೆ ನಡೆದುಕೊಳ್ಳಬೇಕು" ಎಂದು ಹೇಳುತ್ತಾನೆ. ಆಗ ದುರ್ಯೋಧನನು ಮುಗುಳುನಕ್ಕು ಭೀಷ್ಮರನ್ನು ಕುರಿತು " ಅಜ್ಜ, ನಿಮಗೆ ವಂದಿಸಿ, ಆಶೀರ್ವಾದವನ್ನು ಪಡೆದು ಹೋಗುವ ನಿರ್ಧಾರದಿಂದ ಬಂದೆನು. ಏನು ಶತ್ರುಗಳೊಡನೆ ಸಂಧಿಯ ಒಪ್ಪಂದವನ್ನು ಮಾಡಿಕೊಳ್ಳಲೆಂದು ಬಂದಿರುವೆನೇ? ಯುದ್ಧದಲ್ಲಿ ನಾನು ಮಾಡಬೇಕಾದ ಕಾರ್ಯ ಯಾವುದು ಹೇಳಿರಿ. ನಾನು ಪಾಂಡವರಲ್ಲಿ ನೆಲಕ್ಕಾಗಿ ಯುದ್ಧ ಮಾಡುವೆನು ಎಂದು ತಿಳಿದಿರುವಿರೇ; ಖಂಡಿತ ಇಲ್ಲ. ನಾನು ಛಲಕ್ಕಾಗಿ

ಯುದ್ಧ ಮಾಡುವೆನು. ನನ್ನ ಪಾಲಿಗೆ ಇದು ಪಾಳುಭೂಮಿ. ಮಿತ್ರನಾದ ಕರ್ಣನನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ಹೊಸಬಾಳು ಬಾಳುವೆನೇ? ಖಂಡಿತ ಇಲ್ಲ. ನನ್ನ ಪ್ರೀತಿಯ ಗೆಳೆಯನಾದ ಕರ್ಣನನ್ನು, ಪ್ರೀತಿಯ ತಮ್ಮನಾದ ದುಶ್ಯಾಸನನನ್ನು, ನನ್ನ ನೂರು ಜನ ತಮ್ಮಂದಿರನ್ನು ಕೊಂದ ಅರ್ಜುನ ಮತ್ತು ಭೀಮ ಇರುವತನಕ ಹಾಗೂ ನನ್ನ ದೇಹದಲ್ಲಿ ಪ್ರಾಣ ಇರುವತನಕ ನಾನು ಸಂಧಿಯನ್ನು ಒಪ್ಪುವುದಿಲ್ಲ. ಮೊದಲು ಅವರಿಬ್ಬರನ್ನು ಕೊಲ್ಲುವೆನು; ಕೊಂದ ಬಳಿಕ ಸಂಧಿ ಮಾಡಿಕೊಳ್ಳುವೆನು. ನನ್ನ ದುಃಖವು ತಣ್ಣಗಾದಾಗ ಪ್ರಸಿದ್ಧನಾದ ಧರ್ಮರಾಯನೊಡನೆ ಸಂಧಿಯನ್ನು ಮಾಡಿಕೊಳ್ಳಲು ಆಗುವುದಿಲ್ಲ ಎಂದು ಹೇಳುವೆನೇ?" ಎಂದು ಹೇಳಿದನು.

**ಅಥವಾ**

**ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.**

ದುರ್ಯೋಧನನು ಭೀಷ್ಮರನ್ನು ಕುರಿತು "ನಾನು ಪಾಂಡವರಲ್ಲಿ ನೆಲಕ್ಕಾಗಿ ಯುದ್ಧ ಮಾಡುವೆನು ಎಂದು ತಿಳಿದಿರುವಿರೇ; ಚಲಕ್ಕಾಗಿ ಯುದ್ಧ ಮಾಡುವೆನು. ನನ್ನ ಪಾಲಿಗೆ ಇದು ಪಾಳುಭೂಮಿ. ಮಿತ್ರನಾದ ಕರ್ಣನನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ಹೊಸಬಾಳು ಬಾಳುವೆನೇ? ಅಜ್ಜ, ನನ್ನ ಪ್ರೀತಿಯ ಗೆಳೆಯನಾದ ಕರ್ಣನನ್ನು, ಪ್ರೀತಿಯ ತಮ್ಮನಾದ ದುಶ್ಯಾಸನನನ್ನು, ನನ್ನ ನೂರು ಜನ ತಮ್ಮಂದಿರನ್ನು ಕೊಂದ ಅರ್ಜುನ ಮತ್ತು ಭೀಮ ಇರುವತನಕ ಹಾಗೂ ನನ್ನ ದೇಹದಲ್ಲಿ ಪ್ರಾಣ ಇರುವತನಕ ನಾನು ಸಂಧಿಯನ್ನು ಒಪ್ಪುವುದಿಲ್ಲ. ಮೊದಲು ಅವರಿಬ್ಬರನ್ನು ಕೊಲ್ಲುವೆನು; ಕೊಂದ ಬಳಿಕ ಸಂಧಿ ಮಾಡಿಕೊಳ್ಳುವೆನು. ನನ್ನ ದುಃಖವು ತಣ್ಣಗಾದಾಗ ಪ್ರಸಿದ್ಧನಾದ ಧರ್ಮರಾಯನೊಡನೆ ಸಂಧಿಯನ್ನು ಮಾಡಿಕೊಳ್ಳಲು ಆಗುವುದಿಲ್ಲ ಎಂದು ಹೇಳುವೆನೇ? ನನ್ನ ನೂರುಜನ ತಮ್ಮಂದಿರು ಶತ್ರುಗಳನ್ನು ಎದುರಿಸಿ ಯುದ್ಧಮಾಡಿ ಸತ್ತರು. ಆಗ ನನಗೆ ಕೋಪವು ಹುಟ್ಟಿ ಹೊರಹೊಮ್ಮಿತು. ಸತ್ತವರು ಮತ್ತೆ ಹುಟ್ಟುವುದಿಲ್ಲವೇ? ಆದ್ದರಿಂದ ಪಾಂಡವರೊಡನೆ ಯುದ್ಧಮಾಡಿ, ಛಲವನ್ನೇ ಮೆರೆಯುವೆನು. ಅಜ್ಜ, ನಾನು ಪಾಂಡವರೊಡನೆ ಯುದ್ಧ ಮಾಡದೆ ಇರುವುದಿಲ್ಲ. ಇಂದಿನ ಯುದ್ಧದಲ್ಲಿ ಒಂದೋ ಪಾಂಡವರು ಭೂಮಿಗೆ ಒಡೆಯರಾಗುವರು ಅಥವಾ ನಾನು ಭೂಮಿಗೆ ಒಡೆಯನಾಗುವೆನು. ಆದ್ದರಿಂದ ನಾನು ಯುದ್ಧವನ್ನು ಮಾಡುವೆನು" ಎಂದು ಹೇಳಿದನು. ಹೀಗೆ ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ಅಭಿವ್ಯಕ್ತವಾಗಿದೆ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1 * 4 = 4 (2+2)**

**43. ಸಾಮಾನ್ಯವಾಗಿ ವಿದ್ಯಾರ್ಥಿಗಳು ತಮ್ಮ ವಿಷಯಗಳನ್ನು ಕೆಲವು ಕಷ್ಟವಾದವು, ಕೆಲವು ಸುಲಭವಾದವು ಎಂದು ಭಾವಿಸುತ್ತಾರೆ. ಅದು ಒಳ್ಳೆಯದಲ್ಲ. ಅದಕ್ಕೆ ಕಾರಣ ಏನೇ ಇರಬಹುದು. ನಿಮ್ಮ ಶಿಕ್ಷಕರು ಆ ವಿಷಯ ಕಷ್ಟವೆಂದು ಹೇಳಿರಬಹುದು. ಇಲ್ಲವೆ ನಿಮ್ಮ ಗೆಳೆಯರು "ಆ ವಿಷಯ ಮಹಾಕಷ್ಟ, ಕಬ್ಬಿಣದ ಕಡಲೆಯಂತೆ ಕಠಿಣ" ಎಂದು ನಾಲ್ಕಾರು ಬಾರಿ ಹೇಳಿರಬಹುದು ಅಥವಾ ಆ ವಿಷಯದಲ್ಲಿ ಬಹಳ ಕಡಿಮೆ ಅಂಕ ಬಂದಿರಲೂಬಹುದು. ಈ ಮೂರು ಅಲ್ಲದೆ ಬೇರೆ ಕಾರಣಗಳು ಇರಬಹುದು. ಹೇಗೋ ಆ ವಿಷಯ ಕಷ್ಟವಾದದ್ದು ಎಂಬ ಭಾವನೆಯಿಂದ ಹೊರಬನ್ನಿ. ಏಕೆಂದರೆ ನಿಜವಾಗಿಯೂ ಅದು ಕಷ್ಟವಾಗಿದ್ದರೆ ಉಳಿದ ವಿದ್ಯಾರ್ಥಿಗಳಿಗೂ ಕೂಡಾ ಆ ಸಮಸ್ಯೆ ಇರುತ್ತಿತ್ತು. ಆದರೆ ಅವರು ಹಾಗೆ ಹೇಳುವುದಿಲ್ಲ. ಅಷ್ಟೇ ಏಕೆ ಅದರಲ್ಲೆ ಹೆಚ್ಚು ಅಂಕಗಳನ್ನು ಪಡೆದಿರುತ್ತಾರೆ. ಆದುದರಿಂದ ನೀವು ಅಂತಹ ಆಲೋಚನೆಯಿಂದ ಹೊರಬರಲು ಪ್ರಯತ್ನಿಸಬೇಕು. ಆ ವಿಷಯದ ಬಗೆಗಿರುವ ನಕಾರಾತ್ಮಕ ಆಲೋಚನೆಗಳನ್ನು ಬಿಟ್ಟು, ಇದು ಬಹಳ ಆಸಕ್ತಿಯುತವಾದ ವಿಷಯ, ಸ್ವಲ್ಪ ಶ್ರಮವಹಿಸಿದರೆ ಆ ವಿಷಯ ಅರ್ಥಮಾಡಿಕೊಳ್ಳಬಹುದು. ಉಳಿದ ವಿಷಯಗಳಿಗಿಂತ ಸ್ವಲ್ಪ ಹೆಚ್ಚು ಸಮಯವನ್ನು ನಿಗದಿಗೊಳಿಸಿ ಓದಿದರೆ ಅರ್ಥವಾಗುತ್ತದೆ. ಮತ್ತೆ ಕೆಲವು ಟಿಪ್ಪಣಿಗಳನ್ನು ಮಾಡಿಕೊಂಡು ಪುನರಾವರ್ತನೆ ಮಾಡಿದರೆ ಆದರಲ್ಲೂ ಉತ್ತಮ ಫಲಿತಾಂಶ ಸಾಧಿಸಬಲ್ಲೆ ಎಂದು ಪ್ರಯತ್ನಿಸಬೇಕು. ಆಗ ಆ ವಿಷಯವು ಕೂಡ ಕರತಲಾಮಲಕವಾಗುತ್ತದೆ. ಹಾಗೆ ಆಯಾ ವಿಷಯದ ಕುರಿತು ಆಲೋಚಿಸದೆ ಇದ್ದರೆ, ಪುನರಾವರ್ತನೆ ಮಾಡದೆ, ಪ್ರಯೋಗಶೀಲರಾಗದೆ ಹೋಗಿದ್ದರೆ ಥಾಮಸ್ ಅಲ್ವಾ ಎಡಿಸನ್, ಐನ್‌ಸ್ಟೀನ್‌ನಂತಹ ವಿಜ್ಞಾನಿಗಳು ಯಶಸ್ಸು ಸಾಧಿಸುತ್ತಿರಲಿಲ್ಲ.**

**ಪ್ರಶ್ನೆಗಳು :**

**(ಅ) ವಿದ್ಯಾರ್ಥಿಗಳು ಕಷ್ಟದ ವಿಷಯಗಳಲ್ಲಿ ಹೆಚ್ಚು ಅಂಕಗಳಿಸಲು ಹೇಗೆ ಪ್ರಯತ್ನಿಸಬೇಕು?**

ಕಷ್ಟದ ವಿಷಯದ ಬಗೆಗಿರುವ ನಕಾರಾತ್ಮಕ ಆಲೋಚನೆಗಳನ್ನು ಬಿಟ್ಟು, ಇದು ಬಹಳ ಆಸಕ್ತಿಯುತವಾದ ವಿಷಯ, ಸ್ವಲ್ಪ ಶ್ರಮವಹಿಸಿದರೆ ಆ ವಿಷಯ ಅರ್ಥಮಾಡಿಕೊಳ್ಳಬಹುದು. ಉಳಿದ ವಿಷಯಗಳಿಗಿಂತ ಸ್ವಲ್ಪ ಹೆಚ್ಚು ಸಮಯವನ್ನು ನಿಗದಿಗೊಳಿಸಿ ಓದಿದರೆ ಅರ್ಥವಾಗುತ್ತದೆ. ಮತ್ತೆ ಕೆಲವು ಟಿಪ್ಪಣಿಗಳನ್ನು ಮಾಡಿಕೊಂಡು ಪುನರಾವರ್ತನೆ ಮಾಡಿದರೆ ಆದರಲ್ಲೂ ಉತ್ತಮ ಫಲಿತಾಂಶ ಸಾಧಿಸಬಲ್ಲೆ ಎಂದು ಪ್ರಯತ್ನಿಸಬೇಕು. ಇದರಿಂದಾಗಿ ವಿದ್ಯಾರ್ಥಿಗಳು ಕಷ್ಟದ ವಿಷಯಗಳಲ್ಲಿ ಹೆಚ್ಚು ಅಂಕಗಳಿಸಲು ಸಾಧ್ಯವಾಗುತ್ತದೆ.

**(ಬ) ಕೆಲವು ವಿಷಯಗಳು ಕಷ್ಟಕರ ಎಂಬ ಆಲೋಚನೆ ಬರಲು ಕಾರಣವೇನು?**

ಶಿಕ್ಷಕರು ಆ ವಿಷಯ ಕಷ್ಟವೆಂದು ಹೇಳಿರಬಹುದು. ಇಲ್ಲವೆ ನಿಮ್ಮ ಗೆಳೆಯರು "ಆ ವಿಷಯ ಮಹಾಕಷ್ಟ, ಕಬ್ಬಿಣದ ಕಡಲೆಯಂತೆ ಕಠಿಣ" ಎಂದು ನಾಲ್ಕಾರು ಬಾರಿ ಹೇಳಿರಬಹುದು ಅಥವಾ ಆ ವಿಷಯದಲ್ಲಿ ಬಹಳ ಕಡಿಮೆ ಅಂಕ ಬಂದಿರಲೂಬಹುದು. ಈ ಮೂರು ಅಲ್ಲದೆ ಬೇರೆ ಕಾರಣಗಳು ಇರಬಹುದು. ಇದರಿಂದಾಗಿ ಸಾಮಾನ್ಯವಾಗಿ ವಿದ್ಯಾರ್ಥಿಗಳು ತಮ್ಮ ವಿಷಯಗಳನ್ನು ಕೆಲವು ಕಷ್ಟವಾದವು, ಕೆಲವು ಸುಲಭವಾದವು ಎಂದು ಭಾವಿಸುತ್ತಾರೆ.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರವನ್ನು ಬರೆಯಿರಿ. 1 * 5 = 5**

**44. ನಿಮ್ಮನ್ನು ದಾವಣಗೆರೆ ಜಿಲ್ಲೆಯ ಮಳಲಕೆರೆ ಗ್ರಾಮದ ನಿವಾಸಿ 'ಅನುಷಾ' ಎಂದು ಭಾವಿಸಿಕೊಂಡು, ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಆರಂಭಿಸುವಂತೆ ಕೋರಿ ಮಾನ್ಯ ಶಿಕ್ಷಣ ಸಚಿವರಿಗೆ ಪತ್ರವನ್ನು ಬರೆಯಿರಿ.**

ಇಂದ

ಅನುಷಾ<br>10 ನೆಯ ತರಗತಿ<br>ಮಳಲಕೆರೆ<br>ದಾವಣಗೆರೆ ಜಿಲ್ಲೆ

ದಿನಾಂಕ : 10–01–2025<br>ಸ್ಥಳ : ಮಳಲಕೆರೆ

ಇವರಿಗೆ

ಮಾನ್ಯ ಶಿಕ್ಷಣ ಸಚಿವರು<br>ಕರ್ನಾಟಕ ಸರ್ಕಾರ<br>ವಿಧಾನ ಸೌಧ<br>ಬೆಂಗಳೂರು

ಸನ್ಮಾನ್ಯರೇ,

ವಿಷಯ : ನಮ್ಮ ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಆರಂಭಿಸುವಂತೆ ಕೋರಿ ಮನವಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನಮ್ಮ ಗ್ರಾಮದಲ್ಲಿ ಸುಮಾರು 8000 ಕ್ಕೂ ಹೆಚ್ಚು ಜನಸಂಖ್ಯೆಯಿದೆ. ನಮ್ಮ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆಯಲ್ಲಿ 1000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ನಮ್ಮ ಗ್ರಾಮದ ವಿದ್ಯಾರ್ಥಿಗಳು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಮುಂದಿನ ವ್ಯಾಸಂಗಕ್ಕೆ ತಾಲೂಕಿನ ಕೇಂದ್ರ ಸ್ಥಾನಕ್ಕೆ ಹೋಗಬೇಕಾಗಿದೆ. ಇದು ನಮ್ಮ ಗ್ರಾಮದಿಂದ ಸುಮಾರು 30 ಕಿ. ಮೀ. ಇದೆ. ಸೂಕ್ತವಾದ ಬಸ್ಸಿನ ವ್ಯವಸ್ಥೆಯು ಸಹ ಇರುವುದಿಲ್ಲ. ಇದರಿಂದಾಗಿ ಬಹಳಷ್ಟು ವಿದ್ಯಾರ್ಥಿಗಳು ಅದರಲ್ಲೂ ಹೆಣ್ಣು ಮಕ್ಕಳು ತಮ್ಮ ವ್ಯಾಸಂಗವನ್ನು ಮುಂದುರಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ತಾವು ಈ ಬಗ್ಗೆ ಗಮನಹರಿಸಿ ನಮ್ಮ ಗ್ರಾದಲ್ಲಿ ಒಂದು ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಆರಂಭಿಸಬೇಕೆಂದು ಈ ಮೂಲಕ ಸವಿನಯದಿಂದ ಕೇಳಿಕೊಳ್ಳುತ್ತೇನೆ. ಇದರಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಅದರಲ್ಲೂ ಹೆಣ್ಣು ಮಕ್ಕಳಿಗೆ ಬಹಳ ಉಪಯೋಗವಾಗುತ್ತದೆ.

ಈ ನನ್ನ ಕೋರಿಕೆಯ ಬಹುಬೇಗ ಈಡೇರುವುದೆಂದು ನಂಬಿರುತೇನೆ.

ವಂದನೆಗಳೊಡನೆ

ತಮ್ಮ ನಂಬುಗೆಯ<br>ಸಹಿ/–<br>(ಅನುಷಾ)

ಹೊರವಿಳಾಸ

| ಇಂದ | ಇವರಿಗೆ |
|---|---|
| ಅನುಷಾ<br>10 ನೆಯ ತರಗತಿ<br>ಮಳಲಕೆರೆ<br>ದಾವಣಗೆರೆ ಜಿಲ್ಲೆ | ಮಾನ್ಯ ಶಿಕ್ಷಣ ಸಚಿವರು<br>ಕರ್ನಾಟಕ ಸರ್ಕಾರ<br>ವಿಧಾನ ಸೌಧ<br>ಬೆಂಗಳೂರು |

**ಅಥವಾ**

**ನಿಮ್ಮನ್ನು ಮಧುಗಿರಿಯ ಸರ್ಕಾರಿ ಪ್ರೌಢಶಾಲೆಯ 'ನವೀನ್' ಎಂದು ಭಾವಿಸಿಕೊಂಡು, 'ರಾಷ್ಟ್ರೀಯ ಪೋಷಣ್ ಅಭಿಯಾನ' ಕಾರ್ಯಕ್ರಮ ಮಹತ್ತ್ವವನ್ನು ಕುರಿತು ಮೈಸೂರಿನಲ್ಲಿ ವಾಸವಾಗಿರುವ ಗೆಳತಿ 'ಸವಿತಾ'ಳಿಗೆ ಪತ್ರವನ್ನು ಬರೆಯಿರಿ.**

ಕ್ಷೇಮ ಶ್ರೀ

ದಿನಾಂಕ : 10–01–2025
ನವೀನ್
10 ನೆಯ ತರಗತಿ
ಸರ್ಕಾರಿ ಪ್ರೌಢಶಾಲೆ
ಮಧುಗಿರಿ

ಪ್ರೀತಿಯ ಗೆಳತಿಗೆ ನಿನ್ನ ಪ್ರೀತಿಯ ಗೆಳೆಯನು ಮಾಡುವ ವಂದನೆಗಳು.

ಇಲ್ಲಿ ನಾವೆಲ್ಲರೂ ಕ್ಷೇಮವಾಗಿದ್ದೇವೆ. ಅಲ್ಲಿ ತಾವೆಲ್ಲರೂ ಕ್ಷೇಮವಾಗಿರುವಿರೆಂದು ನಂಬಿರುತ್ತೇನೆ.

ನಿನ್ನ ನನ್ನ ಭೇಟಿಯಾಗಿ ಬಹಳ ದಿನಗಳಾಯಿತು. ನಿನ್ನ ಅಧ್ಯಯನ ಹೇಗೆ ನಡೆಯುತ್ತಿದೆ. ನಾನು ಬಹಳ ಪರಿಶ್ರಮದಿಂದ ಅಧ್ಯಯನ ಮಾಡುತ್ತಿದ್ದೇನೆ. ಈ ಬಾರಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಅತ್ಯುನ್ನತ ದರ್ಜೆಯಲ್ಲಿ ಉತ್ತೀರ್ಣನಾಗಬೇಕೆಂಬುದು ನನ್ನ ಬಯಕೆಯಾಗಿದೆ. ನಮ್ಮ ಶಾಲೆಯಲ್ಲಿ ಶಿಕ್ಷಕರು ನನ್ನ ಓದಿಗೆ ಸೂಕ್ತ ಸಹಕಾರವನ್ನು ಕಾಲಕಾಲಕ್ಕೆ ನೀಡುತ್ತಿದ್ದಾರೆ. ಖಂಡಿತ ನಾನು ಅತ್ಯುನ್ನತ ದರ್ಜೆಯಲ್ಲಿ ಉತ್ತೀರ್ಣನಾಗಿ ಈ ಶಾಲೆಗೆ ಕೀರ್ತಿಯನ್ನು ತರುತ್ತೇನೆ.

ನಮ್ಮ ಶಾಲೆಯಲ್ಲಿ 'ರಾಷ್ಟ್ರೀಯ ಪೋಷಣ್ ಅಭಿಯಾನ' ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ನಮ್ಮ ಕ್ಷೇತ್ರಶಿಕ್ಷಣಾಧಿಕಾರಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಉಪನ್ಯಾಸವನ್ನು ಮಾಡಿ 'ರಾಷ್ಟ್ರೀಯ ಪೋಷಣ್ ಅಭಿಯಾನ' ಕಾರ್ಯಕ್ರಮದ ಮಹತ್ತ್ವವನ್ನು ತಿಳಿಸಿಕೊಟ್ಟರು. ಅಪೌಷ್ಟಿಕತೆ ಮುಕ್ತ ಭಾರತವನ್ನಾಗಿ ಮಾಡುವ ದೃಷ್ಟಿಯಿಂದ 'ರಾಷ್ಟ್ರೀಯ ಪೋಷಣ್ ಅಭಿಯಾನ'ವನ್ನು ಆರಂಭಿಸಲಾಗಿದೆ. ಭಾರತದಲ್ಲಿರುವ ಅಂಗನವಾಡಿಗಳ ಸೇವೆಯನ್ನು ಬಳಕೆ ಮಾಡಿಕೊಂಡು ಅತಿ ಹೆಚ್ಚು ಅಪೌಷ್ಟಿಕತೆ ಹೊಂದಿರುವ 0 ಯಿಂದ 6 ವರ್ಷದೊಳಗಿನ ಮಕ್ಕಳು ಮತ್ತು ಗರ್ಭಿಣಿಯರಿರುವ ಜಿಲ್ಲೆಗಳನ್ನು ಗುರುತಿಸಿ, ಅವರಿಗೆ ಸೂಕ್ತ ಪೌಷ್ಟಿಕಾಂಶವಿರುವ ಆಹಾರವನ್ನು ಉಚಿತವಾಗಿ ವಿತರಿಸಲಾಗುತ್ತದೆ. ಪೌಷ್ಟಿಕಾಂಶಯುಕ್ತ ಸಮತೋಲಿತ ಆಹಾರವನ್ನು ನೀಡುವುದರಿಂದ ಮಕ್ಕಳು ಆರೋಗ್ಯವಂತರಾಗಿ ದೇಶದ ಉತ್ತಮ ಪ್ರಜೆಯಾಗಲು ಸಹಾಯಕವಾಗುತ್ತದೆ. ಗರ್ಭಿಣಿಯರಿಗೆ ಪೌಷ್ಟಿಕಾಂಶಯುಕ್ತ ಸಮತೋಲಿತ ಆಹಾರವನ್ನು ನೀಡುವುದರಿಂದ ಆರೋಗ್ಯವಂತ ಮಕ್ಕಳು ಜನಿಸುತ್ತಾರೆ. 'ಸದೃಢ ದೇಹದಲ್ಲಿ; ಸದೃಢ ಮನಸ್ಸು' ಇರುತ್ತದೆ ಎಂಬುದಾಗಿ ತಿಳಿಸಿದರು. ಇದೊಂದು ಮಹತ್ತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದೆ. ನೀನು ಭೇಟಿಯಾದಾಗ ಇದರ ಬಗ್ಗೆ ವಿವರವಾಗಿ ತಿಳಿಸುತ್ತೇನೆ.

ಈ ಪತ್ರದಲ್ಲಿ ಏನಾದರೂ ತಪ್ಪುಗಳಿದ್ದರೆ ಕ್ಷಮೆಯಿರಲಿ. ಎಲ್ಲಾ ವಿಷಯಕ್ಕೂ ಈ ಪತ್ರವನ್ನು ಕಂಡಕೂಡಲೇ ಮರುಪತ್ರವನ್ನು ಬರೆಯುವುದು.

ವಂದನೆಗಳೊಡನೆ

ನಿನ್ನ ಪ್ರೀತಿಯ
ಸಹಿ/–
(ನವೀನ್)

ಹೊರವಿಳಾಸ

| ಇಂದ | ಇವರಿಗೆ |
|---|---|
| ನವೀನ್<br>10 ನೆಯ ತರಗತಿ<br>ಸರ್ಕಾರಿ ಪ್ರೌಢಶಾಲೆ<br>ಮಧುಗಿರಿ | ಕುಮಾರಿ ಸವಿತಾ<br>ಕುವೆಂಪು ನಗರ<br>ಮೈಸೂರು |

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ. 1 * 5 = 5**

**45. ರಾಷ್ಟ್ರೀಯ ಭಾವೈಕ್ಯ ಬೆಳೆಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ.**

**ಪ್ರಸ್ತಾವನೆ :–** ದೇಶ ಪ್ರೇಮ ಹಾಗೂ ರಾಷ್ಟ್ರೀಯ ಭಾವೈಕ್ಯವನ್ನು ಬೆಳೆಸುವಲ್ಲಿ ರಾಷ್ಟ್ರೀಯ ಹಬ್ಬಗಳು ಮಹತ್ತ್ವದ ಸ್ಥಾನವನ್ನು ವಹಿಸುತ್ತವೆ. ರಾಷ್ಟ್ರೀಯ ಹಬ್ಬಗಳು ರಾಷ್ಟ್ರದ ಜನರಲ್ಲಿರುವ ಜಾತಿ, ಮತ, ವರ್ಣ, ಧರ್ಮ, ಭಾಷೆ, ಪ್ರಾಂತ್ಯ ಭೇದಭಾವಗಳನ್ನು ಹೋಗಲಾಡಿಸಿ ನಾವೆಲ್ಲರೂ ಒಂದೇ ಎಂಬ ರಾಷ್ಟ್ರೀಯ ಮನೋಭಾವವನ್ನು ಮೂಡಿಸುತ್ತವೆ. ಆದ್ದರಿಂದ ರಾಷ್ಟ್ರೀಯ ಹಬ್ಬಗಳನ್ನು ಬಹು ವಿಜೃಂಭಣೆಯಿಂದ ಆಚರಿಸಬೇಕು.

**ವಿಷಯ ನಿರೂಪಣೆ :–** ನಮ್ಮ ಭಾರತ ದೇಶದಲ್ಲಿ ಆಗಸ್ಟ್ 15 ರ ಸ್ವಾತಂತ್ರ್ಯೋತ್ಸವ, ಜನವರಿ 26 ರ ಗಣರಾಜ್ಯೋತ್ಸವ, ಅಕ್ಟೋಬರ್ 2 ರ ಮಹಾತ್ಮ ಗಾಂಧೀ ಜಯಂತಿ ಮೊದಲಾದ ದಿನಗಳನ್ನು ರಾಷ್ಟ್ರೀಯ ಹಬ್ಬಗಳು ಎಂದು ಆಚರಿಸಲಾಗುತ್ತದೆ. ರಾಷ್ಟ್ರದಲ್ಲಿ ವಾಸಿಸುವ ಜನರೆಲ್ಲರೂ ಒಗ್ಗೂಡಿ ಆಚರಿಸಬೇಕಾದ ಹಬ್ಬದ ದಿನಗಳಿವು. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ, ರಕ್ಷಣೆಗಾಗಿ, ಏಳಿಗೆಗಾಗಿ ದುಡಿದ ಮಹನೀಯರುಗಳನ್ನು ಸ್ಮರಿಸುವ ದಿನಗಳಿವು. ನಮ್ಮ ಹಿರಿಯರ ತ್ಯಾಗ, ಬಲಿದಾನಗಳ ಮಹತ್ತ್ವವನ್ನು ಅರಿಯುವ ದಿನಗಳಿವು. ಮುಂದಿನ ಜನಾಂಗಕ್ಕೆ ನಮ್ಮ ದೇಶದ ಸಮಗ್ರತೆ ಮತ್ತು ಏಕತೆಯನ್ನು ಕಾಪಾಡುವಂತೆ ದೀಕ್ಷೆ ಕೊಡುವ ದಿನಗಳಿವು. ರಾಷ್ಟ್ರಭಕ್ತರ ಜೀವನ, ಸಾಧನೆಗಳನ್ನು ಮಕ್ಕಳಿಗೆ ತಿಳಿಸಿ ಹೇಳುವ ದಿನಗಳಿವು. ನಮ್ಮ ದೇಶವನ್ನು ಸಂರಕ್ಷಣೆ ಮಾಡುವ ವೀರ ಸೈನಿಕರಿಗೆ

ಗೌರವ ಸೂಚಿಸುವ ದಿನಗಳಿವು. ಪ್ರತಿಯೊಬ್ಬ ಭಾರತೀಯನು ಸಂಭ್ರಮದಿಂದ ಭಾಗವಹಿಸಿ ತನ್ನ ದೇಶಪ್ರೇಮವನ್ನು ಜಗತ್ತಿಗೆ ಸಾರುವ ಸುದಿನಗಳಿವು. ರಾಷ್ಟ್ರೀಯ ಹಬ್ಬಗಳು ಶಾಲಾಕಾಲೇಜು, ಸರ್ಕಾರಿ ಕಚೇರಿಗಳಲ್ಲಿ ಮಾತ್ರ ಆಚರಿಸುವ ಹಬ್ಬಗಳಾಗಬಾರದು. ಪ್ರತಿ ಮನೆ, ಗ್ರಾಮ, ಪಟ್ಟಣ, ನಗರಗಳಲ್ಲಿ ಜಾತಿ, ಮತ, ವರ್ಣ, ಧರ್ಮ, ಭಾಷೆ, ಪ್ರಾಂತ್ಯ  ಭೇದಭಾವಗಳಿಲ್ಲದೆ ಆಚರಿಸುವ ಪ್ರಮುಖ ಹಬ್ಬವಾಗಬೇಕು. ಆಗ ಮಾತ್ರ ನಾವೆಲ್ಲರೂ ಒಂದೇ ಎಂಬ ರಾಷ್ಟ್ರೀಯ ಭಾವೈಕ್ಯತೆಯು ಮೂಡಲು ಸಾಧ್ಯವಾಗುತ್ತದೆ.
**ಉಪಸಂಹಾರ :–** ಶಾಲಾ, ಕಾಲೇಜು ಹಾಗೂ ಸರ್ಕಾರಿ ಕಛೇರಿಗಳಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಬಹುವಿಜೃಂಭಣೆಯಿಂದ ಆಚರಿಸಬೇಕು. ಒಂದೆಡೆ ಸೇರಿ ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳಬೇಕು. ಪ್ರತಿಯೊಬ್ಬರ ಮನೆ ಮನಗಳಲ್ಲೂ ಹಬ್ಬದ ಸಂಭ್ರಮವಿರಬೇಕು. ನಾವು ಆಚರಿಸುತ್ತಿರುವ ದಿನಗಳ ಮಹತ್ತ್ವದ ಬಗ್ಗೆ ಎಲ್ಲರಿಗೂ ಅರಿವು ಮೂಡಿಸಬೇಕು. ನಮ್ಮ ದೇಶದ ಸ್ವತಂತ್ರ ಸೇನಾನಿಗಳ ಬಗ್ಗೆ ಅಭಿಮಾನ ಮೂಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಪ್ರತಿ ಮನೆ, ಗ್ರಾಮ, ಪಟ್ಟಣ, ನಗರಗಳಲ್ಲಿ ಇದು ನಮ್ಮ ಹಬ್ಬವೆಂಬ ಸಂಭ್ರಮವಿರಬೇಕು ಎಂಬುದು ನನ್ನ ಅಭಿಪ್ರಾಯವಾಗಿದೆ.

**ಅಥವಾ**

**ಸಾಮಾಜಿಕ ಜಾಲತಾಣಗಳ ಸದ್ಬಳಕೆ.**

**ಪೀಠಿಕೆ :** ಇಂದಿನ ತಂತ್ರಜ್ಞಾನ ಆಧಾರಿತ ಯುಗದಲ್ಲಿ ಸಾಮಾಜಿಕ ಜಾಲತಾಣಗಳು ಮಹತ್ತ್ವದ ಪಾತ್ರವನ್ನು ವಹಿಸುತ್ತಿವೆ. ಫೇಸ್ಬುಕ್, ಟ್ವಿಟರ್, ಇನ್ಸ್ಟಾಗ್ರಾಮ್, ವಾಟ್ಸಾಪ್ ಮೊದಲಾದ ಸಾಮಾಜಿಕ ಜಾಲತಾಣಗಳು ಜಗತ್ತಿನ ಜನರನ್ನು ನಿಕಟವಾಗಿಸಿಕೊಂಡಿವೆ. ಇವುಗಳಿಲ್ಲದೆ ಜೀವನವೇ ಸಾಧ್ಯವಿಲ್ಲ ಎನ್ನುವಷ್ಟರಮಟ್ಟಿಗೆ ಸಾಮಾಜಿಕ ಜಾಲತಾಣಗಳು ಆಬಾಲವೃದ್ಧರವರೆಗೆ ಎಲ್ಲರನ್ನೂ ಆಕರ್ಷಿಸಿವೆ. ಇವುಗಳನ್ನು ಬಳಸುವಲ್ಲಿ ಎಚ್ಚರಿಕೆ ಇಲ್ಲದಿದ್ದರೆ ಅಪಾಯ ಖಂಡಿತ. ಆದ್ದರಿಂದ ಇವುಗಳನ್ನು ಸದ್ಬಳಕೆ ಮಾಡಿಕೊಂಡಾಗ ಮಾತ್ರ ನಮ್ಮ ಜ್ಞಾನಾಭಿವೃದ್ಧಿಯಾಗುತ್ತದೆ; ಉತ್ತಮ ಮನರಂಜನೆಯನ್ನೂ ಸಹ ನೀಡುತ್ತದೆ.
**ವಿಷಯ ನಿರೂಪಣೆ :** ಸಾಮಾಜಿಕ ಜಾಲತಾಣಗಳಲ್ಲಿ ಸಮಾಜದ ಪ್ರಗತಿಗೆ ಸಹಾಯ ಮಾಡುವ ಉಪಯುಕ್ತ ವಿಷಯಗಳನ್ನು ಹಂಚಿಕೊಳ್ಳಬೇಕು. ವಿದ್ಯಾಭ್ಯಾಸ, ಉದ್ಯೋಗಾವಕಾಶ, ಆರೋಗ್ಯ ಮಾಹಿತಿ, ತಂತ್ರಜ್ಞಾನ ಸಂಬಂಧಿತ ವಿಷಯಗಳಿಗೆ ಬಳಕೆ ಮಾಡಿಕೊಳ್ಳಬೇಕು. ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮತ್ತು ಸಾಮೂಹಿಕ ಹೋರಾಟವನ್ನು ಸಂಘಟಿಸಲು ಇವು ಪೂರಕವಾಗಬೇಕು. ಕಲೆ, ಸಾಹಿತ್ಯ, ವೈಯಕ್ತಿಕ ಪ್ರತಿಭೆ ಪ್ರದರ್ಶನಕ್ಕೆ ಇವು ವೇದಿಕೆಯಾಗಬೇಕು. ವಿದ್ಯಾರ್ಥಿಗಳು ಪ್ರಾಜೆಕ್ಟ್ ಕಾರ್ಯಗಳಿಗೆ ಹಾಗೂ ಹೊಸ ವಿಷಯಗಳನ್ನು ಕಲಿಯಲು ಇವನ್ನು ಬಳಸಿಕೊಳ್ಳಬೇಕು. ಸಾಮಾಜಿಕ ಜಾಲತಾಣಗಳಲ್ಲಿ ದೊರೆಯುವ ಶೈಕ್ಷಣಿಕ ಮಾಹಿತಿಗಳು ಮತ್ತು ವೀಡಿಯೋಗಳನ್ನು ಬಳಸಿಕೊಂಡು ನಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಳಗಳನ್ನು ಅತಿಯಾಗಿ ಬಳಸುವ ಚಟಕ್ಕೆ ಬಲಿಯಾಗಬಾರದು; ಇದರಿಂದ ಮಾನಸಿಕ ಆರೋಗ್ಯ ಹಾಳಾಗುತ್ತದೆ. ಸಾಮಾಜಿಕ ಜಾಲತಾಣಗಳನ್ನು ನಕಲಿ / ಸುಳ್ಳು ಸುದ್ದಿಗಳನ್ನು ಹಂಚಿಕೊಳ್ಳುವುದಕ್ಕೆ ಹಾಗೂ ಧರ್ಮ / ಮತ / ಜಾತಿ / ಭಾಷೆ ಆಧಾರಿತ ದ್ವೇಷವನ್ನು ಹರಡುವುದಕ್ಕೆ ಖಂಡಿತ ಬಳಸಬಾರದು. ಸಾಮಾಜಿಕವಾಗಿ ಅಪಾಯಕಾರಿಯಾದ ಮಾಹಿತಿಗಳನ್ನು ಮತ್ತು ವೀಡಿಯೋಗಳನ್ನು ಹಂಚಿಕೊಳ್ಳಬಾರದು. ಅಶ್ಲೀಲವಾದ ಅಸಹ್ಯಕರವಾದ ಮಾಹಿತಿಗಳನ್ನು, ವೀಡಿಯೋಗಳನ್ನು ನೋಡುವುದು ಹಾಗೂ ಹಂಚಿಕೊಳ್ಳುವುದು ಅಪರಾಧವಾಗುತ್ತದೆ ಎಂಬ ಅರಿವು ನಮಗಿರಬೇಕು. ವ್ಯಕ್ತಿಯ ಖಾಸಗಿತನಕ್ಕೆ ಧಕ್ಕೆಯನ್ನುಂಟು ಮಾಡುವ ಮಾಹಿತಿಗಳನ್ನು ಮತು ವೀಡಿಯೋಗಳನ್ನು ಹಂಚಿಕೊಳ್ಳಬಾರದು. ಇದರಿಂದ ದೇಶಕ್ಕೂ ಮತ್ತು ಸಮಾಜಕ್ಕೂ ಅಪಾಯಕಾರಿಯಾಗಬಹುದು.
**ಉಪಸಂಹಾರ :** ಜಾಣ್ಮೆಯಿಂದ, ಎಚ್ಚರಿಕೆಯಿಂದ ಉತ್ತಮ ಸಾಮಾಜಿಕ ಕಳಕಳಿಯುಳ್ಳ ಉದ್ದೇಶಗಳಿಗೆ ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಳ್ಳಬೇಕು. ನಂಬಿಕೆಗೆ ಅರ್ಹವಲ್ಲದ ಮಾಹಿತಿಗಳನ್ನು / ವೀಡಿಯೋಗಳನ್ನು ಹಂಚಿಕೊಳ್ಳಬಾರದು. ಜಾಗರೂಕತೆಯಿಂದ ಜವಾಬ್ದಾರಿಯುತ ಪ್ರಜೆಗಳಾಗಿ ಶಿಷ್ಟತನದಿಂದ ಕೂಡಿದ ಮಾಹಿತಿಗಳನ್ನು ಮತ್ತು ವೀಡಿಯೋಗಳನ್ನು ಹಂಚಿಕೊಂಡಾಗ ಮಾತ್ರ ಸಾಮಾಜಿಕ ಜಾಲತಾಣಗಳು ಉತ್ತಮ ಸಾಧನವಾಗುತ್ತವೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

---- 0 ----

# ನಿಮ್ಮ ಶಾಲೆಯ ಉತ್ತಮ ಫಲಿತಾಂಶಕ್ಕಾಗಿ ನಮ್ಮ ಪ್ರಕಟಣೆಗಳು














ನಿಮ್ಮ ಪ್ರೀತಿಯ ಗೆಳೆಯ

## ಬಿ. ರವೀಶ್ ಕುಮಾರ್

**ನಿವೃತ್ತ ಕನ್ನಡ ಭಾಷಾ ಶಿಕ್ಷಕರು**
**ರಾಜ್ಯ ಸಂಪನ್ಮೂಲ ವ್ಯಕ್ತಿಗಳು (ಕನ್ನಡ)**
**# 2905, ಹೊನ್ನಸಿರಿ, 3 ನೆಯ ತಿರುವು,**
**'ಎಫ್' ಬ್ಲಾಕ್, ಕನಕದಾಸನಗರ, ಮೈಸೂರು – 570033**

**ಸಂಚಾರಿವಾಣಿ ಸಂಖ್ಯೆ : 9448958498**